## ತಾಯ್ನಾಡಿಗೆ ನಮನ

ವಿವಿಧತೆಯಲಿ ಏಕತೆಯನು ಸಾರುವ
ಈ ಪುಣ್ಯಧರೆಯಲ್ಲಿ
ನಾವೇ ಧನ್ಯರು ಈ ನಮ್ಮ
ಮಾತೃಭೂಮಿ ಭಾರತದಲಿ

ನಾವೀ ಮಾತೃಭೂಮಿಯ ಉದರದಲ್ಲಿ
ಜನಿಸಿದ ಕುವರರು
ಆಗಬೇಕು ತಾಯ್ನಾಡ ಕಾಯುವ
ಕೆಚ್ಚೆದೆಯ ವೀರರು

ರಾಷ್ಟ್ರೋತ್ಸವ, ಸ್ವಾತಂತ್ರ್ಯೋತ್ಸವ
ತರುವುದೆಲ್ಲರಿಗೆ ಮೆರುಗು
ಅವೆಲ್ಲ ಕೀರ್ತಿ ಸಾರಲಿ ಈ
ದೇಶ ದೇಶದ ಹೊರಗೂ

ಹಿಮಗಿರಿ, ಶಿಖರಮಣಿ ಅವೆಲ್ಲ ಪುತ್ರರು
ಕೃಷ್ಣ, ಕಾವೇರಿ, ತಪತಿ ಅವೆಲ್ಲ ಮಿತ್ರರು!

ಜಗದೀಜನನಿ ನಮ್ಮ ಭಾರತಿ
ಮೆಚ್ಚಲೇಬೇಕು ಇವೆಲ್ಲ ಸಂಸ್ಕೃತಿ
ಈ ತಾಯ್ನಾಡಿಗೆ ನನ ನುಡಿ ನಮನ!

ಶ್ರೇಷ್ಠ ಕಲೆಗಳ ಜನ್ಮತಾಣ
ಗಾನಕೋಗಿಲೆಗಳ ಉದಯಸ್ಥಾನ!

ಹಲವು ಯೋಧರು ಪ್ರಾಣತೆತ್ತ ಈ ನಾಡು
ಭಾಂದವ್ಯದ ನೆಲೆ ತುಂಬಿಕೊಂಡಿಹ ಬೀಡು!

ಇದೇ ನಮ್ಮ ಮಾತೃಭೂಮಿಯ ವೈಭವ!
ಇಲ್ಲಿ ಜನಿಸಿದ ನಾವೇ ಧನ್ಯರು ಎಂದು ಹೆಮ್ಮೆ ಪ

ಜಗದ ಜನನಿ ನಮ್ಮ ಭಾರತಿ
ಮೆಚ್ಚಲೇಬೇಕು ಇವೆಲ್ಲ ಸಂಸ್ಕೃತಿ
ಈ ತಾಯ್ನಾಡಿಗೆ ನನ ನುಡಿ ನಮನ!

ತನ್ನ ಉದರದಲಿ ತುಂಬಿಕೊಂಡಿಹಳು
ಸಾಹಿತ್ಯ, ಕಲೆಗಳ ಸಂಗಮ
ಇದರ ಮುಂದೆ ನಡೆಯದು ಪಾಶ್ಚಾತ್ಯ
ಸಂಸ್ಕೃತಿಗಳ ಜಂಗಮ!

ಅಸ್ಪೃಶ್ಯತೆ, ಅಸಮಾನತೆಯ ಬೆಟ್ಟ
ನಿಲ್ಲಬೇಕೆಂದೇ ಇವಳ ಗುರಿ
ಅದ ಕಾರ್ಯರೂಪಕೆ ತರುವುದು ನಮ್ಮ
ಕರ್ತವ್ಯ ! ನೀವ್ ತಿಳಿಯಿರಿ !

ಒಂದೇ ತತ್ತ್ವವನು, ಮೂಲ ಮಂತ್ರವನು
ಸಾರುತಿಹಳು ನಮ್ಮ ಭಾರತಿ
ಇವಳ ಪ್ರೀತಿಯುಂಡು ಬಾಳಿರೆ
ಎತ್ತ ಬೆರೆಯಲ ನಮ್ಮ ಆರತಿ !

ಕರಮುಗಿವೆವು ನಿನ್ನ ಕೀರ್ತಿಗೆ !
ಶಿರಬಾಗಿವೆವು ನಿನ್ನ ನಾಮಕೆ !

ಜಗದ್ಜನನಿ ನಮ್ಮ ಭಾರತಿ
ಬೆಳಗಲೇಬೇಕು ಇವಳ ಸಂಸ್ಕೃತಿ !
ಈ ತಾಯ್ನಾಡಿಗೆ ನನ ನಮನವನ!